# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.

## <u>ಸತ್ರ ಮೊಕದ್ದಮೆ ಸಂಖ್ಯೆಃ 37/2024.</u>

| | | | |
|---|---|---|---|
| ಹೆಸರು | : | ಕರುಣೇಶಗೌಡ ಜೆ. | ಫ್ರಾಸಾ-03 |
| ತಂದೆಯ ಹೆಸರು | : | ಪಂಪನಗೌಡ | ಚಾಸಾ-08 |
| ವಯಸ್ಸು | : | 46 ವರ್ಷ | |
| ಉದ್ಯೋಗ | : | ಪಿ.ಐ, ಲೋಕಾಯುಕ್ತ | |
| ವಾಸಸ್ಥಳ | : | ಧಾರವಾಡ | |

ದಿನಾಂಕಃ 06-03-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**<u>ಸರಕಾರಿ ಅಭಿಯೋಜಕರು ಗೈರು ಹಾಜರಾದ ಕಾರಣ ಸಾಕ್ಷಿಯು ಸ್ವತಃ ಸಾಕ್ಷಿ ನುಡಿಯಲು ಅನುಮತಿ ಕೇಳಿದ್ದರಿಂದ ನೀಡಲಾಯಿತು.</u>**

**<u>ಮುಖ್ಯ ವಿಚಾರಣೆಃ ಸ್ವತಃ</u>**

ನಾನು ದಿನಾಂಕಃ 08-05-2015 ರಿಂದ 06-09-2018 ರವರೆಗೆ ಹುನಗುಂದ ವೃತ್ತದಲ್ಲಿ ಸಿ.ಪಿ.ಐ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ 13-04-2017 ರಂದು ಸದರಿ ಪ್ರಕರಣದ ತನಿಖೆಯನ್ನು ಚಾಸಾ-7 ಇವರಿಂದ ಪಡೆದು, ಪರಿಶೀಲಿಸಿದ್ದೇನೆ. ದಿನಾಂಕಃ 14-04-2017 ರಂದು ಚಾಸಾ-2 ರಿಂದ 4 ರವರ ಹೇಳಿಕೆಗಳನ್ನು ಪಡೆದಿದ್ದೇನೆ. ದಿನಾಂಕಃ 08-05-2017 ರಂದು 1 ನೇ ಅರೋಪಿ ನಿರೀಕ್ಷಣಾ ಜಾಮೀನಿನೊಂದಿಗೆ ಠಾಣೆಗೆ ಹಾಜರಾಗಿದ್ದು ವಿಚಾರಣಗೊಳಪಡಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೇನೆ. ಅದೇ ದಿನ ಚಾಸಾ-2 ರಿಂದ 4 ರ ಮರುಹೇಳಿಕೆ ಪಡೆದಿದ್ದೇನೆ.

ದಿನಾಂಕಃ 30-05-2017 ರಂದು 2 ಮತ್ತು 4 ನೇ ಆರೋಪಿತರ ಟ್ರ್ಯಾಕ್ಟರಗಳನ್ನು ನ್ಯಾಯಾಲಯದ ಆದೇಶದ ಮೇರೆಗೆ ಬಿಡುಗಡೆ ಮಾಡಿದ್ದೇನೆ. ಆ ಸಮಯದಲ್ಲಿ ಪಂಚನಾಮೆ ಜರುಗಿಸಿ ನಿಪಿ-4 ರಿಂದ 8 ಪೋಟೋಗಳನ್ನು ತೆಗೆದಿದ್ದೇನೆ. ತನಿಖೆ ಪೂರೈಸಿ ಆರೋಪಿತರ ಮೇಲೆ ಅದೇ ದಿನ ದೋಷಾರೋಪಣೆ ಪತ್ರ ದಾಖಲಿಸಿರುತ್ತೇನೆ.

**<u>ಪಾಟೀಸವಾಲುಃ ಆರೋಪಿತರ ಪರ ಶ್ರೀ. ಸಿ.ಬಿ.ಎಸ್ ವಕೀಲರಿಂದ.</u>**

ಗಾಣದಾಳ ಗ್ರಾಮದಲ್ಲಿ ಪಿಂಕ್ ಗ್ರಾನೈಟ್ ಸಿಗುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ-4 ರಿಂದ 8 ಪೋಟೋಗಳು ಇದೇ ಕೇಸಗೆ ಸಂಬಂಧಿಸಿದ್ದು ಸದರಿ ಪೋಟೋಗಳನ್ನು ಆರೋಪಿತನ ಹೊಲದಲ್ಲಿ ತೆಗೆಯಲಾಗಿದೆ. ಸಾಕ್ಷಿ ಪುನಃ ಹೇಳುವುದೇನೆಂದರೆ ಸದರಿ ಪೋಟೋಗಳನ್ನು ಠಾಣೆಯಲ್ಲಿ ತೆಗೆಯಲಾಗಿದೆ ಎನ್ನುವುದು ನಿಜ. ಸದರಿ ಕಲ್ಲುಗಳನ್ನು 1 ನೇ ಆರೋಪಿಯ ಜಮೀನಿಂದ ಠಾಣೆಗೆ ಹೇಗೆ ಬಂದವು ಎಂದು ಪಂಚನಾಮೆಯಲ್ಲಿ ನಮೂದಿಸಿಲ್ಲ. ಚಾಸಾ-7 ತಪ್ಪು ತನಿಖೆ ಮಾಡಿದ್ದರೂ ಸಹಿತ ನಿರಪರಾಧಿಗಳ ಮೇಲೆ ಸುಳ್ಳು ದೋಷಾರೋಪಣೆ ದಾಖಲಿಸಿದ್ದೇನೆ ಎನ್ನುವುದು ಸರಿಯಲ್ಲ. ಚಾಸಾ-2 ರಿಂದ 4 ರವರ ಹೇಳಿಕೆ ಹಾಗೂ ಮರುಹೇಳಿಕೆಗಳನ್ನು ಪಡೆದಿಲ್ಲ ಎನ್ನುವುದು ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಅವರ ಮೇಲೆ ಸುಳ್ಳು ಕೇಸು ದಾಖಲು ಮಾಡಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

06-03-2026

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.